ಯಾರಾದರೂ ನಮಾಝನ್ನು ಮರೆತುಬಿಟ್ಟರೆ ನೆನಪಾದಾಗ ಅದನ್ನು ನಿರ್ವಹಿಸಲಿ. ಇದಲ್ಲದೆ ಅದಕ್ಕೆ ಬೇರೆ ಪ್ರಾಯಶ್ಚಿತ್ತವಿಲ್ಲ

ಅನಸ್ ಬಿನ್ ಮಾಲಿಕ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಯಾರಾದರೂ ನಮಾಝನ್ನು ಮರೆತುಬಿಟ್ಟರೆ ನೆನಪಾದಾಗ ಅದನ್ನು ನಿರ್ವಹಿಸಲಿ. ಇದಲ್ಲದೆ ಅದಕ್ಕೆ ಬೇರೆ ಪ್ರಾಯಶ್ಚಿತ್ತವಿಲ್ಲ. "ನನ್ನ ನೆನಪಿಗಾಗಿ ನಮಾಝ್ ನಿರ್ವಹಿಸಿರಿ." [ತ್ವಾಹಾ 14]" [صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ವಿವರಿಸುವುದೇನೆಂದರೆ, ಯಾರಾದರೂ ಕಡ್ಡಾಯ ನಮಾಝನ್ನು ನಿರ್ವಹಿಸಲು ಅದರ ಸಮಯವು ಮುಗಿಯುವ ತನಕ ಮರೆತುಬಿಟ್ಟರೆ, ಅದರ ನೆನಪಾದಾಗ ಅದನ್ನು ನಿರ್ವಹಿಸಲು ತ್ವರೆ ಮಾಡಲಿ. ಮರೆವಿನಿಂದಾಗಿ ನಮಾಝನ್ನು ತೊರೆದವರು ಆ ತಪ್ಪಿಗಾಗಿ ಅದು ನೆನಪಾದಾಗ ನಿರ್ವಹಿಸುವುದಲ್ಲದೆ ಅದಕ್ಕೆ ಬೇರೆ ಪರಿಹಾರವಿಲ್ಲ. ಅಲ್ಲಾಹು ಪವಿತ್ರ ಕುರ್ಆನಿನಲ್ಲಿ ಹೇಳುತ್ತಾನೆ: "ನನ್ನ ನೆನಪಿಗಾಗಿ ನಮಾಝ್ ನಿರ್ವಹಿಸಿರಿ." [ತ್ವಾಹಾ 14]. ಅಂದರೆ, ಮರೆತುಹೋದ ನಮಾಝನ್ನು ನೆನಪಾದಾಗ ನಿರ್ವಹಿಸಿರಿ."

https://sunnah.global/hadeeth/kn/show/65088